# ಇನ್ನೇಕೆ ಯಮನ ಬಾಧೆಗಳು

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 71.
2. **Ref.:** Shri Purandara Dasara Sahitya Part – 3, Mahatmya Gnyana, edited by Shri Betageri Krishna Sharma and Shri Bengeri Huchha Rayaru, page No. 79.
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 286.
4. **Note:** Lyrics given without highlights are as per Ref. 1. The wordings given in green highlights are as per Ref. 2. The wordings in Ref. 3 are a mix of Ref. 1 and Ref. 2 and these are not considered here.
5. **Note:** Singer has followed lyrics as in Ref. 1.

ರಾಗ: ಆನಂದ ಭೈರವಿ ತಾಳ: ಛಾಪು

ಇನ್ನ್ಯಾಕೆ ಯಮನ ಭಾಧೆಗಳು ಎನ್ನ
ಜಿಹ್ವೆಲಿ ಹರಿ ನಾಮ ಸ್ಮರಣೆ ಒಂದಿರಲು || ಪ ||

ಪತಿತ ಪಾವನನೆಂಬ ನಾಮ ಅತಿ
ಹಿತದಿಂದ ಮುನಿಗಳು ಸ್ತುತಿಸುವ ನಾಮ
ಕೃತು ಕೋಟಿ ಫಲವೀವ ನಾಮ ಸ-
ದ್ಗತಿಗೆ ಸಾಧನವಾಗುವ ಹರಿನಾಮ || 1 ||

ಮುನ್ನೊಬ್ಬ ಪ್ರಹ್ಲಾದ ಸಾಕ್ಷಿ ಆ
ಕನ್ಯಾ ಶಿರೋಮಣಿ ದ್ರೌಪದಿ ಸಾಕ್ಷಿ
ಚಿಣ್ಣನೆಂದಜಮಿಳ ಸಾಕ್ಷಿ ನಿಜ-
ಪುಣ್ಯ ಲೋಕವನಾಳ್ವ ಧ್ರುವ ರಾಯ ಸಾಕ್ಷಿ || 2 ||

ಹದಿನಾಲ್ಕು ಲೋಕವನಾಳ್ವ ದಿವ್ಯ-
ಮದನ ಜನಕನಾಗಿ ಮುದದಿಂದ ಬಾಳ್ವ

ಪದುಮನಾಭನಾಗಿ ಇರುವ ಗುರು
ಮಧ್ವೇಶ ಪುರಂದರ ವಿಠಲ ಕಾಯ್ವ || 3 ||

**Note:** The lyrics given below in green highlights are as per Ref. 2 above.

ರಾಗ: ಆನಂದ ಭೈರವಿ ತಾಳ: ಅಟ

ಇನ್ನೇಕೆ ಯಮನ ಭಾಧೆಗಳು ಎನ್ನ
ಜಿಹ್ವೆಯೊಳಗೆ ಹರಿ ನಾಮವಿರಲು || ಪ ||

ಪತಿತ ಪಾವನನೆಂಬ ನಾಮ ಸಕಲ
ಶ್ರುತಿ-ತತಿಗಳಿಗೆಲ್ಲ ನಿಲುಕದೀ ನಾಮ
ಕ್ರತು ಕೋಟಿ ಫಲ ಒಂದೇ ನಾಮ, ಸದ್-
ಗತಿಗೆ ಸಂಗಡ ಬಹೋದತಿ ದಿವ್ಯ ನಾಮ || ೧ ||

ಮುನ್ನೊಬ್ಬ ಪ್ರಹ್ಲಾದ ಸಾಕ್ಷಿ, ನಮ್ಮ
ಕನ್ಯಾ ಶಿರೋಮಣಿ ದ್ರೌಪದಿ ಸಾಕ್ಷಿ
ಚೆನ್ನ ಅಜಾಮಿಳನೊಬ್ಬ ಸಾಕ್ಷಿ, ಆ
ಉನ್ನಂತ ಲೋಕವಾಳುವ ಧ್ರುವ ಸಾಕ್ಷಿ || ೨ ||

ಹದಿನಾಲ್ಕು ಲೋಕವಾಳುವ ನಮ್ಮ
ಮದನ ಜನಕನಾಗಿ ಮಹಿಮೆ ತೋರುವ
ಪದುಮನಾಭನಾಗಿ ಮೆರೆವ ನಮ್ಮ
ಪುರಂದರ ವಿಠಲನ ಹರುಷದಿ ಕರೆವ || ೩ ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

ಹರಿನಾಮದ ಉಪಾಸಕರಿಗೆ ಯಮನ ಬಾಧೆ ಏನೂ ಮಾಡಬಾರದೆಂದು ಇವರಲ್ಲಿ ದಾಸರು ದೃಢವಾದ ಮಾತಿನಲ್ಲಿ ಹೇಳಿದ್ದಾರೆ.

**ಪತಿತ ಪಾವನ** – ಪಾಪದಲ್ಲಿ ಬಿದ್ದವರನ್ನು (ಕೆಟ್ಟವರನ್ನು) ಮೇಲೆತ್ತಿ ಒಳಿತನ್ನು ಮಾಡುವುದು.

**ಕೃತು** = ಯಜ್ಞ

**ಕ್ರತುಕೋಟಿ ಫಲ** – ಒಂದು ಕೋಟಿ ಯಜ್ಞಗಳನ್ನು ಮಾಡಿದ ಪುಣ್ಯಫಲ.

**ಸದ್ಗತಿಗೆ** – ಮುಕ್ತಿಗೆ.

**ಚಿಣ್ಣನೆಂದ** – ಮಗನನ್ನು ಕರೆದ.

**ಬಾಳ್ವ** – ಇಲ್ಲಿ ಬಾಳಿಸುವ ಎಂದರ್ಥವಾಗುತ್ತದೆ.

**ಉನ್ನಂತ** = ಉನ್ನತ

**Classification:** Keerthane
**Ankita:** purandara vittala
**Location:** NA
**Category:** mahatmya jnana, vidhi chintane
**Sub-Category:** nalige, yama, Krishna, smarane, muni, phala, sadgati, mukti, prahallada, draupadi, Dhruva, ajamila, punya, loka, divya, shruti, santosha,
**Pravachana:** NA
**Explanation:** NA